## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No.717/2022**

**CW : 18 PW: 09**

### ವಿ.ಸಿ.ಯ ಮುಖಾಂತರ ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು
**ದಿನಾಂಕ : 26.11.2025**

| | |
|---|---|
| ಹೆಸರು | : ಸಂತೋಷ ಹಳ್ಳೂರ |
| ತಂದೆಯ ಹೆಸರು | : ಧರೆಪ್ಪ ಹಳ್ಳೂರ |
| ವಯಸ್ಸು | : 43 |
| ಉದ್ಯೋಗ | : ಸಿ.ಪಿ.ಐ |
| ವಾಸಸ್ಥಳ | : ಅಥಣಿ |

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ನಾನು ಶಹಾಬಾದ ನಗರ ಠಾಣೆಯಲ್ಲಿ ಅಭಿರಕ್ಷಕರು ಎಂದು ಜೂನ್-2021 ರಿಂದ ಅಗಸ್ಟ-2022 ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ: 30/11/2021 ರಂದು ಮುಂದಿನ ತನಖೆಗಾಗಿ ಪ್ರಕರಣದ ಕಡತವನ್ನು ಚಾಸಾ-17 ಇವರಿಂದ ಪಡೆದುಕೊಂಡಿದ್ದು ಇರುತ್ತದೆ. ನಂತರದಲ್ಲಿ ನಾನು ಅದೇ ದಿನ ಚಾಸಾ-5 ಹಾಗೂ 6 ಸಮಕ್ಷಮ ಘಟನಾ ಸ್ಥಳಕ್ಕೆ ಹೋಗಿ ಮಧ್ಯಾಹ್ನ 3 ರಿಂದ 4 ರವರೆಗೆ ನಿ.ಪಿ.1 ರಂತೆ ಪಂಚನಾಮೆಯನ್ನು ಜರುತಿಸಿರುತ್ತೇನೆ, ನಿ.ಪಿ.1 ರ ಮೇಲೆ ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಬ) ಎಂದು ನಿಶಾನೆಗೊಳಿಸಲಾಯಿತು.

ನಂತರದಲ್ಲಿ ನಾನು ಚಾಸಾ-9 ಹಾಗೂ 10 ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಪ್ರ.ವ.ವರದಿಯನ್ನು ಪಡೆದುಕೊಂಡಿರುವ ಕುರಿತು ಚಾಸಾ-15 ಇವರಿಂದ ರಸೀದಿಯನ್ನು ಪಡೆದುಕೊಂಡಿರುತ್ತೇನೆ. ದಿ: 11/12/2021 ರಂದು ಅಪಘಾತಕ್ಕೆ ಒಳಪಟ್ಟಿರುವ ವಾಹನಗಳನ್ನು ಜಪ್ತು ಪಡಿಸಿಕೊಂಡಿರುತ್ತೇನೆ. ಸದರಿ ವಾಹನ ಸಂಖ್ಯೆ ಕೆ.ಎ-32, ಹೆಚ್.ಎ-5032 ಇರುತ್ತದೆ. ಈ ವಾಹನವು ಹಿರೋ ಹೊಂಡಾ ಪ್ಯಾಷನ್ ಪ್ರೋ ಕಂಪನಿಗೆ ಸೇರಿರುತ್ತದೆ. ಅದೇ ದಿನದಂದು ನಾನು ಚಾಸಾ-1, 9 ಹಾಗೂ 10 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತನನ್ನು ದಸ್ತಗಿರ ಗೊಳಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ.

ಚಾಸಾ-12 ರವರಿಂದ ಎಮ್.ವಿ. ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ದಿ: 15/12/2021 ರಂದು ಚಾಸಾ-11 ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರದಲ್ಲಿ ನಷ್ಟಭರ್ತಿ ಪ್ರ.ಪತ್ರವನ್ನು ಪಡೆದುಕೊಂಡು ವಾಹನಗಳನ್ನು ವಾಪಸ್ಸು ಕೊಟ್ಟಿರುತ್ತೇನೆ.

ದಿ: 23/12/2021 ರಂದು ಲೋಕೋಪಯೋಗಿ ಇಲಾಖೆಯಿಂದ ಗುನ್ಹಾ ಸ್ಥಳದ ನಕಾಶೆಯನ್ನು ಪಡೆದುಕೊಂಡಿರುತ್ತೇನೆ. ದಿ: 10/01/2022 ರಂದು ಚಾಸಾ-16 ರವರಿಂದ ಭಾರತೀಯ ಸಾಕ್ಷಿ ಅಧಿನಿಯಮ ಕಲಂ 65 (ಬಿ) ಇದರಡಿಯಲ್ಲಿ ಸಲ್ಲಿಸಿರುವ ಪ್ರ.ಪತ್ರವನ್ನು ತೆಗೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ.

ದಿ: 20/02/2022 ರಂದು ಚಾಸಾ-14 ಇವರಿಂದ ಪಿ.ಎಮ್. ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ.

ಸಾಕಷ್ಟು ಸಾಕ್ಷ್ಯಾಧಾರಗಳಿರುವ ಕಾರಣ ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

ಈಗಾಗಲೆ ನಿಶಾನೆಗೊಳಿಸಿರುವ ಜಪ್ತಿ ಪಂಚನಾಮೆಯ ಮೇಲಿರುವ ಸಹಿಯನ್ನು ನಿ.ಪಿ.12 (ಬಿ) ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.11 ರ ಮೇಲೆ ಸಾಕ್ಷಿದಾರರ ಸಹಿಯನ್ನು ನಿ.ಪಿ.11 (ಬಿ) ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.13 ರ ಮೇಲೆ ಸಾಕ್ಷಿದಾರರ ಸಹಿಯನ್ನು ನಿ.ಪಿ.13 (ಬಿ) ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.14 ರ ಮೇಲೆ ಸಾಕ್ಷಿದಾರರ ಸಹಿಯನ್ನು ನಿ.ಪಿ.14 (ಎ) ಎಂದು ನಿಶಾನೆಗೊಳಿಸಲಾಯಿತು. ನಿ.ಪಿ.10 ರ ಮೇಲೆ ಸಾಕ್ಷಿದಾರರ ಸಹಿಯನ್ನು ನಿ.ಪಿ.10 (ಎ) ಎಂದು ನಿಶಾನೆಗೊಳಿಸಲಾಯಿತು.

ಗುನ್ಹಾ ಸ್ಥಳ ಹಾಗೂ ಶವ ಪಂಚನಾಮೆಯ ಕಾಲಕ್ಕೆ ತೆಗೆದ ಎರಡು ಫೋಟೋಗಳನ್ನು ಈಗಾಗಲೆ ನಿ.ಪಿ.2 ರಿಂದ 4, 8 ಮತ್ತು 9 ಭಾವಚಿತ್ರಗಳನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ನಿ.ಪಿ-2 ರಿಂದ 4 ಹಾಗೂ 8 ರಿಂದ 9 ಭಾವಚಿತ್ರಿಗಳು ಕೊಟ್ಟೆ ಅಗಿರುತ್ತವೆ ಸರಿಯಲ್ಲ. ಇದಕ್ಕೆ ಸಂಬಂಧಪಟ್ಟ ನಕ್ಷೆ ಹಾಗೂ ವರದಿಯು ಖೊಟ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.1 ರ ಮೇಲೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.18 ರ ಮೇಲೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿ.ಪಿ.3 ರಂತೆ ಶವಪಂಚನಾಮೆಗೈದು ಭಾವಚಿತ್ರಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಂತರದಲ್ಲಿ ಪಂಚರ ಸಮಕ್ಷಮ ಗುನ್ನ ಪಂಚನಾಮೆಯನ್ನು ಮಾಡಿ ಅಪಘಾತಕ್ಕೆ ಒಳಪಟ್ಟಿರುವ ವಾಹನಗಳನ್ನು ಜಪ್ತುಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**CC.No.717/2022**

**CW : 18 PW: 08**

ವಾಹನ ಮಾಲೀಕರಿಗೆ ನಾನು ನಷ್ಟಭರ್ತಿ ಪ್ರ.ಪತ್ರವನ್ನು ಪಡೆದುಕೊಂಡು ಅವರ ವಾಹನಗಳನ್ನು ಬಿಡುಗಡೆಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಗುನ್ಹಾ ಸ್ಥಳದ ನಕ್ಷೆಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಈ ಪ್ರಕರಣದಲ್ಲಿ ನಾನು ಪಿ.ಎಮ್. ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಗಾಯದ ಪ್ರ.ಪತ್ರಗಳನ್ನು ಪಡೆದುಕೊಂಡು ನಾನು ಕಡತಕ್ಕೆ ಅಳವಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಕರಣದ ಸಾಕ್ಷಿದಾರರ ಹೇಳಿಕೆ ಹಾಗೂ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಡತಕ್ಕೆ ಪ್ರಕರಣಕ್ಕೆ ಸಂಬಂಧಪಟ್ಟ ವಾಹನಗಳ ಎಮ್.ವಿ. ವರದಿಯನ್ನು ಪಡೆದುಕೊಂಡು ಅಳವಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿಗೂ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ನಾನು ಚೆಕಬಂದಿಯಲ್ಲಿ ತೋರಿಸಿರುವ ವ್ಯಕ್ತಿಗಳ ಆಸ್ತಿಯ ಕುರಿತು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಲಬುರಗಿಯಿಂದ ಶಹಾಬಾದ ನೇರವಾದ ರಸ್ತೆ ಎಂದರೆ ಸರಿ. ಸದರಿ ರಸ್ತೆಯ ಮೇಲೆ ಸಾಕಷ್ಟು ವಾಹನಗಳು ಇರುತ್ತವೆ ಎಂದರೆ ಸರಿ.

ನಾನು ಫಿರ್ಯಾದಿಯಿಂದ ಖೊಟ್ಟಿ ಫಿರ್ಯಾದಿಯನ್ನು ಪಡೆದುಕೊಂಡು ಅದರ ತನಿಖೆಯನ್ನು ಗೈದು ಒಂದು ಖೊಟ್ಟಿ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಈ ಪ್ರಕರಣದಲ್ಲಿ ಯಾವುದೇ ಸಂಬಂಧ ಇಲ್ಲದಿದ್ದರೂ ನಾನು ಆತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**